ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಇ- ಆಡಳಿತ / ಶಿಕ್ಷಕ ಮಿತ್ರ / 2020-21 ದಿನಾಂಕ:12-04-2021

::::ಸುತ್ತೋಲೆ::::

**ವಿಷಯ:** ಅಧಿಕಾರಿಗಳ/ಬೋಧಕೇತರ ಸಿಬ್ಬಂದಿಗಳ ಸೇವಾ ಮಾಹಿತಿಯನ್ನು ಶಿಕ್ಷಕ ಮಿತ್ರ (EEDS) ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ-ತಪಾಸಣೆ) ರವರ ಪತ್ರ ಸಂಖ್ಯೆ:ಸಿಆಸುಇ 68 ಕತವ 2019 ದಿನಾಂಕ:23-09-2021 ಮತ್ತು ದಿನಾಂಕ:18-01-2021

*******

ಎಲ್ಲಾ ಅಧಿಕಾರಿ ವೃಂದದ ಮತ್ತು ಬೋಧಕೇತರ ಸಿಬ್ಬಂದಿಗಳ ಸೇವಾ ಮಾಹಿತಿಯನ್ನು ಶಿಕ್ಷಕ ಸೇವಾ ಮಾಹಿತಿ ತಂತ್ರಾಂಶ(ಟಿ.ಡಿ.ಎಸ್) ನಲ್ಲಿ ಅಳವಡಿಸಲಾಗಿತ್ತು. ಟಿ.ಡಿ.ಎಸ್ ನಲ್ಲಿ ಅಳವಡಿಸಲಾದ ಅಧಿಕಾರಿ/ಬೋಧಕೇತರ ಸಿಬ್ಬಂದಿಗಳ ಸಂಪೂರ್ಣ ಸೇವಾ ಮಾಹಿತಿಯನ್ನು ಶಿಕ್ಷಕ ಮಿತ್ರ (EEDS) ತಂತ್ರಾಂಶಕ್ಕೆ ವರ್ಗಾಯಿಸಿದೆ. ಈ ಜ್ಞಾಪನದೊಂದಿಗೆ ಅಡಕಗೊಳಿಸಿದ ಕೈಪಿಡಿಯಂತೆ ಶಿಕ್ಷಕ ಮಿತ್ರ (EEDS) ತಂತ್ರಾಂಶದಲ್ಲಿ ಎಲ್ಲಾ ಕಛೇರಿಯ ಡಿಡಿಓಗಳು ತಮ್ಮ ಡಿಡಿಓ ಲಾಗಿನ್ ಐಡಿ ಮತ್ತು ಪಾಸ್ ವರ್ಡ್ ಬಳಸಿ ಲಾಗಿನ್ ಆಗುವುದು. ಹೋಮ್ ಪೇಜ್ ನಲ್ಲಿ Edit Officer Details / Edit Non-Teaching Details ಕ್ಲಿಕ್ ಮಾಡಿದಾಗ ತಮ್ಮ ಅಧೀನ ಶಾಲೆ/ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ಹಾಗೂ ಅಧಿಕಾರಿಗಳ ಪಟ್ಟಿ ಲಭ್ಯವಾಗುವುದು. ಪ್ರತಿಯೊಂದು ಅಧಿಕಾರಿ/ಸಿಬ್ಬಂದಿಗಳ ಕೆ.ಜಿ.ಐ.ಡಿ ಸಂಖ್ಯೆ ಕ್ಲಿಕ್ ಮಾಡಿ ಆಯಾ ಅಧಿಕಾರಿ/ಸಿಬ್ಬಂದಿಗಳ ಸೇವಾ ಮಾಹಿತಿಯನ್ನು ಈ ಕೆಳಕಂಡ ಸೂಚನೆಗಳಂತೆ ಪರಿಶೀಲಿಸಿ ಅಗತ್ಯವಿದ್ದಲ್ಲಿ ಇಂದೀಕರಿಸಲು ತಿಳಿಸಿದೆ.

1. Basic Details:
   - ಅಧಿಕಾರಿ/ಬೋಧಕೇತರ ಸಿಬ್ಬಂದಿ ಹೆಸರು (ಕನ್ನಡ ಮತ್ತು ಆಂಗ್ಲ), ತಿದ್ದುಪಡಿ ಮಾಡಲು ಅವಕಾಶ ನೀಡಲಾಗಿರುತ್ತದೆ. ಕೆ.ಜಿ.ಐ.ಡಿ ಸಂಖ್ಯೆ ಮತ್ತು ಜನ್ಮ ದಿನಾಂಕವನ್ನು ಈಗಾಗಲೇ ಪರಿಶೀಲಿಸಿರುವುದರಿಂದ ಮಾರ್ಪಾಡು ಮಾಡಲು ಅವಕಾಶ ನೀಡಿರುವುದಿಲ್ಲ.
   - ಅಳವಡಿಸಲಾಗಿರುವ ಎಲ್ಲಾ ಮಾಹಿತಿಯನ್ನು ಪರಿಶೀಲಿಸುವುದು, ಅಗತ್ಯವಿದ್ದಲ್ಲಿ ಅಧಿಕಾರಿ/ಬೋಧಕೇತರ ಸಿಬ್ಬಂದಿಗಳ ಮನವಿ ಪಡೆದು ದಾಖಲೆಗಳಂತೆ ವಿಳಾಸ, ವೈವಾಹಿಕ ಸ್ಥಿತಿ, ಪತಿ/ಪತ್ನಿಯ ವಿವರ, ಪತಿ/ಪತ್ನಿಯ ಉದ್ಯೋಗದ ಮಾಹಿತಿಯನ್ನು ಅಳವಡಿಸಿ ಸಬ್ ಮಿಟ್ ಮಾಡುವುದು.
   - 2006 ನಂತರ ಸೇವೆಗೆ ಸೇರಿದ ಅಧಿಕಾರಿ/ಬೋಧಕೇತರ ಸಿಬ್ಬಂದಿಯವರ ಪ್ರಾನ್ ಸಂಖ್ಯೆ ನಮೂದಿಸುವುದು.
   - ಅಧಿಕಾರಿ/ಬೋಧಕೇತರ ಸಿಬ್ಬಂದಿಯವರು 371 ಜೆ ವ್ಯಾಪ್ತಿಗೆ ಒಳಪಟ್ಟಿದ್ದಲ್ಲಿ ಸಂಬಂಧ ಪಟ್ಟ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ Upload ಮಾಡುವುದು.

2. Working Details:

- ಅಧಿಕಾರಿ/ಬೋಧಕೇತರ ಸಿಬ್ಬಂದಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆ/ಕಛೇರಿ, ತಾಲ್ಲೂಕು ಜಿಲ್ಲೆ, ವಿವರ, ಸೇವೆಗೆ ಸೇರಿದ ದಿನಾಂಕ, ಪ್ರಸ್ತುತ ವೃಂದಕ್ಕೆ ಬಂದ ದಿನಾಂಕ ಮಾಹಿತಿಯನ್ನು ತಿದ್ದುಪಡಿ ಮಾಡಲು ಅವಕಾಶ ನೀಡಲಾಗಿರುತ್ತದೆ.
- ವರ್ಗಾವಣೆ, ಬಡ್ತಿ ಮತ್ತಿತರೆ ಕಾರಣಗಳಿಂದ ಸ್ಥಳ ಬದಲಾವಣೆಯಾಗಿದ್ದಲ್ಲಿ ಅಥವಾ ಅದೇ ಡಿಡಿಓ ವ್ಯಾಪ್ತಿಯ ಇತರೆ ಶಾಲೆಗಳಿಗೆ ಸ್ಥಳ ನಿಯುಕ್ತಿ ಹೊಂದಿದ್ದರೂ ಸಹ Transfer Tab ನಲ್ಲಿ ಲಭ್ಯವಿರುವ Transfer Out/Transfer In ಮೂಲಕವೇ ಮಾಹಿತಿಯನ್ನು ಇಂದೀಕರಿಸುವುದು.
- ಅಧಿಕಾರಿ/ಬೋಧಕೇತರ ಸಿಬ್ಬಂದಿಯವರ ಪ್ರೊಬೇಷನ್ ಅವಧಿ ಘೋಷಣೆಯಾಗಿರುವ ಬಗ್ಗೆ ಮಾಹಿತಿಯನ್ನು ಕಡ್ಡಾಯವಾಗಿ ಇಂಧೀಕರಿಸುವುದು. ಪ್ರೊಬೇಷನ್ ಅವಧಿ ಘೋಷಣೆ ಮಂಜೂರಾಗದ ಅಧಿಕಾರಿ/ಬೋಧಕೇತರ ಸಿಬ್ಬಂದಿಗಳಿಗೆ ವರ್ಗಾವಣೆ ನಿಯಂತ್ರಣ ಕಾಯ್ದೆ ಮತ್ತು ನಿಯಮಗಳನ್ವಯ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
- ಕಾಲಮಿತಿ/ಸ್ವಯಂ ಚಾಲಿತ/ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ವಿವರಗಳನ್ನು ಪರಿಶೀಲಿಸಿ, ಇಂಧೀಕರಿಸಿ ಸಬ್ ಮಿಟ್ ಮಾಡುವುದು.

3. Qualification Details:

- ಟಿ.ಡಿ.ಎಸ್ ನಲ್ಲಿ ಅಳವಡಿಸಲಾದ ವಿದ್ಯಾರ್ಹತೆ ಮಾಹಿತಿಯನ್ನು ಇಲ್ಲಿ ಒದಗಿಸಲಾಗಿದ್ದು, ಪರಿಶೀಲಿಸಿ ಅಗತ್ಯವಿದ್ದಲ್ಲಿ ಇಂದೀಕರಿಸುವುದು. ಹೆಚ್ಚುವರಿ ವಿದ್ಯಾರ್ಹತೆಯ ಮಾಹಿತಿಯಿದ್ದಲ್ಲಿ ಅಳವಡಿಸುವುದು.

4. Departmental Exam Details:

- ಟಿ.ಡಿ.ಎಸ್ ನಲ್ಲಿ ಅಳವಡಿಸಲಾದ ಇಲಾಖಾ ಪರೀಕ್ಷೆ ಮಾಹಿತಿಯನ್ನು ಇಲ್ಲಿ ಒದಗಿಸಲಾಗಿದ್ದು, ಪರಿಶೀಲಿಸಿ ಅಗತ್ಯವಿದ್ದಲ್ಲಿ ಇಂದೀಕರಿಸುವುದು. ಹೆಚ್ಚುವರಿ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಿರುವ ಮಾಹಿತಿಯಿದ್ದಲ್ಲಿ ಅಳವಡಿಸುವುದು.

5. Service Details:

- ಈಗಾಗಲೇ ಅಳವಡಿಸಲಾಗಿರುವ ಸೇವಾ ಮಾಹಿತಿಯನ್ನು ಲಭ್ಯಗೊಳಿಸಲಾಗಿದೆ. ಮಾಹಿತಿಯನ್ನು ಮತ್ತೊಮ್ಮೆ ಸೇವಾವಹಿಯಂತೆ ಪರಿಶೀಲಿಸುವುದು ಹಾಗೂ ಅಗತ್ಯವಿದ್ದಲ್ಲಿ ಇಂದೀಕರಿಸುವುದು.

6. Transfer:

- ವರ್ಗಾವಣೆ/ಬಡ್ತಿ ಮೂಲಕ ಬೇರೆ ಶಾಲೆಗೆ/ಕಛೇರಿಗಳಿಗೆ ಸ್ಥಳ ನಿಯುಕ್ತಿ ಹೊಂದಿದ ಅಧಿಕಾರಿ/ಬೋಧಕೇತರ ಸಿಬ್ಬಂದಿ ಮಾಹಿತಿಯನ್ನು ಮೂಲ ಶಾಲೆ/ಕಛೇರಿಯ ಡಿಡಿಓ ಗಳು ತಮ್ಮ ಲಾಗಿನ್ ನಲ್ಲಿ Transfer Out ಮೂಲಕ ಬಿಡುಗಡೆ ದಿನಾಂಕ ಮತ್ತು ಸ್ಥಳನಿಯುಕ್ತಿ ಹೊಂದಿದ ಶಾಲೆಯ/ಹುದ್ದೆಯ ಮಾಹಿತಿಯನ್ನು ಅಳವಡಿಸುವುದು.
- ವರ್ಗಾವಣೆ/ಬಡ್ತಿ ಮೂಲಕ ಬೇರೆ ಶಾಲೆಗೆ/ಕಛೇರಿಗಳಿಗೆ ಸ್ಥಳ ನಿಯುಕ್ತಿ ಹೊಂದಿದ ಅಧಿಕಾರಿ/ಬೋಧಕೇತರ ಸಿಬ್ಬಂದಿ ಮಾಹಿತಿಯನ್ನು ಮೂಲ ಶಾಲೆ/ಕಛೇರಿಯ

ಡಿಡಿಓ ಗಳು ತಮ್ಮ ಲಾಗಿನ್ ನಲ್ಲಿ Transfer In ಮೂಲಕ ಕರ್ತವ್ಯಕ್ಕೆ ಹಾಜರಾದ ದಿನಾಂಕ ಮತ್ತು ಹುದ್ದೆಯ ಮಾಹಿತಿಯನ್ನು ಅಳವಡಿಸುವುದು.

ಮಾಹಿತಿ ಇಂಧೀಕರಣ ಕಾರ್ಯವನ್ನು ಡಿಡಿಓ ಲಾಗಿನ್ ನಲ್ಲಿ ಮಾತ್ರ ನೀಡಲಾಗಿರುವುದರಿಂದ ಯಾವುದೇ ಅಧಿಕಾರಿ/ಬೋಧಕೇತರ ಸಿಬ್ಬಂದಿ ಸೇವಾ ಮಾಹಿತಿಯಲ್ಲಿ ತಪ್ಪುಗಳಾಗಿರುವ ಬಗ್ಗೆ ಅಥವಾ ಆ ಕಾರಣದಿಂದ ವರ್ಗಾವಣೆ ಅಥವಾ ಇತರೆ ಸೇವಾ ಸೌಲಭ್ಯಗಳಿಂದ ವಂಚಿತರಾಗಿರುವ ಬಗ್ಗೆ ಯಾವುದೇ ದೂರುಗಳು ಸ್ವೀಕೃತವಾದಲ್ಲಿ ಸಂಬಂಧಿಸಿದ ಡಿಡಿಓ ರವರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

ಮೇಲ್ಕಂಡ ಎಲ್ಲಾ ಅಂಶಗಳಂತೆ ಕೈಪಿಡಿಯನ್ನು ಅನುಸರಿಸಿ ಎಲ್ಲಾ ಅಧಿಕಾರಿ/ಬೋಧಕೇತರ ಸಿಬ್ಬಂದಿಗಳ ಮಾಹಿತಿಯನ್ನು ದಿನಾಂಕ:**30-04-2021** ರೊಳಗೆ ಪರಿಶೀಲಿಸಿ ಇಂದೀಕರಿಸಲು ಸೂಚಿಸಿದೆ. ಸಂಬಂಧಿಸಿದಂತೆ ಯಾವುದೇ ಗೊಂದಲಗಳಿದ್ದಲ್ಲಿ ವಿವರವನ್ನು karonlineserviceshelp@gmail.com ಗೆ ಈ-ಮೇಲ್ ಮೂಲಕ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಈ ಮೂಲಕ ತಿಳಿಸಿದೆ.

(ಕರಡು ಪತ್ರ ಮಾನ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ)

ಜಂಟಿ ನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು:

1. ಮಾನ್ಯ ಆಯುಕ್ತರ ಆಪ್ತ ಶಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ರವರ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

ಇವರಿಗೆ,

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ರವರ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ರವರ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4. ನಿರ್ದೇಶಕರು (ಪ್ರೌಢಶಿಕ್ಷಣ) ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
5. ನಿರ್ದೇಶಕರು(ಡಿ.ಎಸ್.ಇ.ಆರ್.ಟಿ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
6. ನಿರ್ದೇಶಕರು ಕ.ಪ್ರೌ.ಶಿ.ಪ.ಮಂಡಳಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
7. ನಿರ್ದೇಶಕರು ಇತರೆ ಪರೀಕ್ಷೆಗಳು, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
8. ನಿರ್ದೇಶಕರು ಕ.ಪ.ಪು.ಸಂಘ(ರಿ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
9. ನಿರ್ದೇಶಕರು ಸಿಸ್ಲೆಪ್ , ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
10. ವಿಭಾಗೀಯ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಬೆಳಗಾಂ, ಕಲ್ಬುರ್ಗಿ ವಿಭಾಗ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

11. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
12. ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
13. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
14. ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ)
15. ಹಿರಿಯ ಸಹಾಯಕ ನಿರ್ದೇಶಕರು(ಆನ್ ಲೈನ್ ಸೇವೆಗಳು), ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
16. ಕಛೇರಿ ಪ್ರತಿ.